**ಓ ಎಸ್ 145/2023 ಪಿಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 07.01.2026 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 4 ನೇ ಪ್ರತಿವಾದಿ ಪರ ಶ್ರೀ ಹೆಚ್.ಎಸ್.ಎಸ್ ವಕೀಲರಿಂದಃ (1, 3, 5 ರಿಂದ 7 ನೇ ಪ್ರತಿವಾದಿಗಳ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಂಡು ಮುಂದುವರಿದಿರುತ್ತಾರೆ.)**

4 ನೇ ಪ್ರತಿವಾದಿಯು 1991 ರಿಂದ ಬೇರೆ ಬೇರೆಯಾಗಿ ವಾಸ ಮಾಡಿಕೊಂಡು ಬರುತ್ತಿದ್ದಾರೆ ಎಂದರೆ ಸರಿ. ದಾವಾ ಷೆಡ್ಯೂಲ್ ಐಟಂ ನಂ. 9 ರ ಆಸ್ತಿ 4 ನೇ ಪ್ರತಿವಾದಿಗೆ ದರಖಾಸ್ತು ಮೂಲಕ ಮಂಜೂರಾಗಿದೆ ಎಂದರೆ ಸರಿ, ಆದರೆ ಆ ಆಸ್ತಿ 4 ಜನರಿಗೆ ಭಾಗ ಆಗಿದೆ. 4 ನೇ ಪ್ರತಿವಾದಿಯು ವೈಯಕ್ತಿಕವಾಗಿ ಕಿಮ್ಮತ್ತು ಕಟ್ಟಿರುವುದರಿಂದ ಅವರಿಗೆ ದಾವಾ ಆಸ್ತಿ ಐಟಂ ನಂ.9 ವೈಯಕ್ತಿಕವಾಗಿ ಮಂಜೂರಾಗಿದೆ ಎಂದರೆ ಸರಿಯಲ್ಲ. ಕಿಮ್ಮತ್ತು ಪಾವತಿ ರಶೀದಿಯು 4 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ದಾವಾ ಆಸ್ತಿ ಐಟಂ ನಂ.9 ರ ಸ್ವತ್ತು 4 ನೇ ಪ್ರತಿವಾದಿಯ ಸ್ವಯಾರ್ಜಿತವೇ ಹೊರತು ಒಟ್ಟು ಕುಟುಂಬದ ಆಸ್ತಿಯಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಂ ನಂ.9 ರ ಮೇಲೆ 4 ನೇ ಪ್ರತಿವಾದಿಗೆ ಹೊರತುಪಡಿಸಿ ನಮಗೆ ಯಾರಿಗೂ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ತನ್ನ ತಂದೆ ಬದುಕಿದ್ದಾಗಲೇ 4 ಜನರಿಗೆ ಭಾಗ ಮಾಡಿದ್ದಾರೆ ಎಂದು ಹೇಳುತ್ತಾರೆ. ಭಾಗ ಮಾಡಿರುವ ಬಗ್ಗೆ ದಾಖಲೆ ಇಲ್ಲ. ಭಾಗ ಮಾಡಲು ನಮ್ಮ ತಂದೆಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ದರಖಾಸ್ತು ಮೂಲಕ ಮಂಜೂರು ಮಾಡುವಂತೆ ಕೋರಿ ನಮ್ಮ ತಂದೆ ಅರ್ಜಿ ಸಲ್ಲಿಸಿರುವ ಬಗ್ಗೆ ಯಾವುದೇ ದಾಖಲೆ ಇಲ್ಲ.

ದಾವಾ ಆಸ್ತಿ ಐಟಂ ನಂ.13 ಸಹ 4 ನೇ ಪ್ರತಿವಾದಿಯ ಸ್ವಯಾರ್ಜಿತ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಂ ನಂ.13 ಸರ್ಕಾರಿ ಜಾಗ ಆಗಿರುವ ಕಾರಣ 4 ನೇ

ಪ್ರತಿವಾದಿಯು ಕಿಮ್ಮತ್ತು ಪಾವತಿ ಮಾಡಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಆ ಸ್ವತ್ತು ತಮ್ಮ ಅಜ್ಜಿಯದು ಮತ್ತು ಅವರು ತನ್ನ ತಂದೆಗೆ ಬರೆದಿದ್ದಾರೆ ಎಂದು ಹೇಳುತ್ತಾರೆ. ನಮ್ಮ ಅಜ್ಜಿಯ ಹೆಸರು ಪಾಪಮ್ಮ. ದಾವಾ ಆಸ್ತಿ ಐಟಂ ನಂ.13 ನಮ್ಮ ಅಜ್ಜಿಗೆ ಸೇರಿತ್ತು ಎಂದು ತೋರಿಸಲು ಮತ್ತು ಅವರು ಅದನ್ನು ನಮ್ಮ ತಂದೆಗೆ ನೀಡಿದ್ದರು ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ. ದಾವಾ ಆಸ್ತಿ ಐಟಂ ನಂ.9 ಮತ್ತು 13 ರಲ್ಲಿ 4 ನೇ ಪತಿವಾದಿಯನ್ನು ಹೊರತುಪಡಿಸಿ ನಮಗೆ ಯಾರಿಗೂ ಯಾವುದೇ ರೀತಿಯ ಹಕ್ಕು ಮತ್ತು ಅಧಿಕಾರ ಇಲ್ಲದೆ ಇದ್ದರೂ ಸಹ ನಾವು ಅವರಿಗೆ ತೊಂದರೆ ನೀಡಲು ಅವುಗಳನ್ನು ದಾವೆಯಲ್ಲಿ ಸೇರಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಎರಡು ಆಸ್ತಿಗಳನ್ನು ಹೊರತುಪಡಿಸಿ ಉಳಿದ ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದರೆ ದಾವಾ ಆಸ್ತಿಗಳೆಲ್ಲವೂ ಒಟ್ಟು ಕುಟುಂಬದ ಆಸ್ತಿಗಳು. ಈ ಎರಡು ಆಸ್ತಿಗಳನ್ನು ಹೊರತುಪಡಿಸಿ ಉಳಿದ ದಾವಾ ಆಸ್ತಿಗಳಲ್ಲಿ ಎಲ್ಲರಿಗೂ ಸಮಾನವಾದ ಭಾಗಾಂಶದ ಹಕ್ಕು ಇದೆ ಎಂದರೆ ಎಲ್ಲಾ ದಾವಾ ಆಸ್ತಿಗಳಲ್ಲಿ ಎಲ್ಲರಿಗೂ ಸಮಾನವಾದ ಭಾಗಾಂಶದ ಹಕ್ಕು ಇದೆ. ದಾವಾ ಆಸ್ತಿ ಐಟಂ ನಂ.9 ಮತ್ತು 13 ರಲ್ಲಿ ನಮಗೆ ಭಾಗಾಂಶದ ಹಕ್ಕು ಇಲ್ಲದೆ ಇದ್ದರೂ ಸಹ ಅವುಗಳನ್ನು ಸೇರಿಸಿ ಹೂಡಿರುವ ಈ ದಾವೆಯು ವಜಾಗೊಳ್ಳಲು ಅರ್ಹವಾಗಿದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**